ಈಜಿಪ್ಷಿಯನ್ ರಾಜರ ನಮೂನೆ ನಮೂನೆಯ ಶಿರೋವಸ್ತ್ರಗಳು... ಪರದೆಗಳು, ಕೊನೆಗೆ ಮೂಲೆಯಲ್ಲಿದ್ದ ಟೀಪಾಯಿ, ಅದರ ಮೇಲೆ ಇಟ್ಟಿದ್ದ ಕಪ್ ಸಾಸರ್ ಕೂಡಾ ಹೊಂಬಣ್ಣದ್ದಾಗಿದ್ದು ಇಡೀ ಕೊಠಡಿಯಲ್ಲಿಯೇ ಈಜಿಪ್ಟಿನ ಆತ್ಮ ಸುಳಿದಾಡಿದಂತಿತ್ತು.

ಸಾದಿಕಾ ಕೇಳಲೋ ಬೇಡವೋ ಎಂದು ಮೀನ ಮೇಷವನ್ನೆಣಿಸುತ್ತಾ 'ನಮ್ಮಲ್ಲಿ ಈ ರೀತಿಯ ವಿಗ್ರಹಗಳನ್ನೆಲ್ಲಾ ಇಡುವುದಿಲ್ಲ... ಅಲ್ಲವೇ' ಎಂದು ಅಲ್ಲಿದ್ದ ಪ್ರತಿಕೃತಿಗಳನ್ನು ತೋರಿಸುತ್ತಾ ಕೇಳಿಯೇ ಬಿಟ್ಟಳು.

'ನಮ್ಮ ಅನೀಸ್‌ಗೆ ಮನೆಯ ಅಲಂಕರಣದ ಬಗ್ಗೆ ಬಹಳ ಅಭಿಮಾನ. ಚಿಕ್ಕವನಾಗಿದ್ದಾಗಿನಿಂದಲೂ ಅವನ ಅಭಿರುಚಿಯೇ ಹಾಗೆ. ಅವನ ಪಾಕೆಟ್‌ಮನಿಯಲ್ಲಿಯೂ ಅವನು ಚಾಕೊಲೇಟ್ ತಿನ್ನದೆ ಮನೆಗೊಂದು ಮನಿಪ್ಲಾಂಟನ್ನಾದರೂ ತರುತ್ತಿದ್ದ' ಎಂದು ವಿವರಣೆ ನೀಡಿ 'ಅವನಿಗೆ ಮೊದಲನೇ ಪೋಸ್ಟಿಂಗ್ ಆಗಿದ್ದು ಕೈರೋಗೆ. ಅಲ್ಲಿನ ಪ್ರಾಚೀನ ನಾಗರಿಕತೆಯಿಂದ ಅವನು ಬಹಳ ಪ್ರಭಾವಿತನಾಗಿದ್ದ. ಮತ್ತೆ ತುಂಬಾ ಕಲಾತ್ಮಕ ಮನೋಭಾವ ಅವನದ್ದು' ಸಗೀರ್ ಸೌಮ್ಯವಾಗಿ ಮಗನ ಬಗ್ಗೆ ಗುಣಗಾನ ಮಾಡಿದ. ಆದರೆ, ಆಸಿಫಾಳಿಗಂತೂ ಮಗನನ್ನು ಬಿಟ್ಟರೆ ಬೇರೆ ಮಾತೇ ಇಲ್ಲ. ಹೊಸಬರು ಎಂಬ ಯಾವ ಸಂಕೋಚಗಳೂ ಇಲ್ಲದೆ ಅವಳು ಮಾತು ಮಾತಿಗೂ 'ನಮ್ಮ ಅನೀಸ್ ಹಾಗೆ, ನಮ್ಮ ಅನೀಸ್ ಹೀಗೆ'ಎಂದು ಹೇಳುತ್ತಲೇ ಇದ್ದಳು

'ಈಗ ನಮ್ಮ ಅನೀಸ್ ಜರ್ಮನಿಯಲ್ಲಿದ್ದಾನೆ. ಹಿಟ್ಲರ್‌ನ ಜರ್ಮನಿಯಲ್ಲಿ!' ಎಂದು ಅವಳು ತುಸುವೇ ನಕ್ಕಳು. 'ಇದೀಗ ಸಾಕು... ಇನ್ನು ಹೊರದೇಶಗಳಿಗೆ ಹೋಗುವುದು ಬೇಡಾ ಅಂತ ನಾನಂತೂ ಅವನಿಗೆ ಬಾರಿ ಬಾರಿ ಹೇಳುತ್ತಿದ್ದೇನೆ. ಇನ್ನೇನು ಆರು ತಿಂಗಳಿನಲ್ಲಿ ಅವನು ಬರುವ ನಿರ್ಧಾರ ಮಾಡಿದ್ದಾನೆ. ಅವನಿಗೆ ಈಗ ಇಪ್ಪತ್ತೊಂಬತ್ತು ವರ್ಷ ನಡೀತಾ ಇದೆ. ಅವನು ಬಂದ ಕೂಡಲೇ ಮದುವೆ ಮಾಡಬೇಕೂಂತಾ ಇದೀವಿ.'

ಸಗೀರ್ ತುಸು ನಕ್ಕ. 'ಎಲ್ಲವೂ ನಾವು ಬಯಸಿದಂತೆಯೇ ನಡೆಯುತ್ತದೆಯೇ... ಅಲ್ಲಾಹನಿಚ್ಛೆ ಇದ್ದಂತೆ ಆಗುತ್ತದೆ. ಅವನು ಬಂದು ಹೆಣ್ಣನ್ನು ನೋಡಬೇಕು, ಒಪ್ಪಬೇಕು. ಅವನು ಹೆಣ್ಣನ್ನು ಒಪ್ಪುವುದೇ ಮುಖ್ಯ.'

'ಹಾಗೆಂದರೆ ಹೇಗೆ... ನಮಗಾದರೂ ಇನ್ನೇನು ಕೆಲಸವಿದೆ ಹೇಳಿ ನೋಡೋಣ... ಇನ್ನೇನು ಒಂದು ವರ್ಷದಲ್ಲಿ ನೀವು ರಿಟೈರ್ ಆಗ್ತೀರಿ. ನಾನಂತೂ ವಾಲಂಟರಿ ರಿಟೈರ್‌ಮೆಂಟ್ ತಗೋತೀನಿ. ನಾವಿಬ್ಬರೂ ಮೊಮ್ಮಕ್ಕಳನ್ನು ಆಡಿಸಿಕೊಂಡು ಹಾಯಾಗಿರೋಣ.'

ಈಗಲಂತೂ ಸಗೀರ್ ಬಾಯಿ ತುಂಬಾ ನಕ್ಕು ಬಿಟ್ಟ. 'ನಮ್ಮ ಅಮ್ಮ ಕೂಡಾ ಹೀಗೆಯೇ ಆಡುತ್ತಿದ್ದರು. ಅವರಿಗೆ ಮಹಾ ಎಷ್ಟು ಮೊಮ್ಮಕ್ಕಳು ಹುಟ್ಟಿದವೋ...' ಎಂದು ಛೇಡಿಸಿಯೇ ಬಿಟ್ಟ.

ದುಃಖ ಪಡುವ ಸರದಿ ಆಸಿಫಾಳದ್ದು. 'ಏನು ಮಾಡಲಿ ಹೇಳಿ... ಎಷ್ಟು ಹರಕೆ ಹೊತ್ತಿದ್ದೆ... ಎಷ್ಟು ಡಾಕ್ಟರಲ್ಲಿ ಸುತ್ತಿ ಸುಣ್ಣವಾಗಿದ್ದೆ. ನನ್ನ ದೇಹವಂತೂ ಔಷಧಗಳ ಪ್ರಯೋಗಾಲಯವಾಗಿತ್ತಲ್ಲಾ... ನಾನೊಂದು ಥರಾ ಗಿನಿಪಿಗ್ ಆಗಿದ್ದೆನಲ್ಲಾ... ಹೇಗೋ ಅಂತೂ ದೇವರು ಕಣ್ಣು ಬಿಟ್ಟು ನನಗೆ ಅದೊಂದು ಕುಡಿಯನ್ನು ದಯಪಾಲಿಸಿದನಲ್ಲಾ... ಅವನ ಸನ್ನಿಧಿಗೆ ನನ್ನ ಕೋಟಿ ಕೋಟಿ ಶುಕ್ರಿಯಾ...'

ಅವಳು ಅನಗತ್ಯವಾಗಿ ಭಾವುಕಳಾಗುತ್ತಿದ್ದಾಳೆ ಎಂದು ಸಗೀರ್‌ಗೆ ಅನ್ನಿಸಿತು. ಆದರೆ, ಅಲ್ಲಿದ್ದ